ಏನಾದರೂ ಒಂದು ಟೈಪ್ ಡಿಸ್ಪೆನ್‌ಮಾಡಿ, ಅವರ ಕಷ್ಟವನ್ನು ನಿವಾರಿಸಲು ಜರೂರಾಗಿ ವ್ಯವಸ್ಥೆ ಮಾಡುತ್ತೀರಾ ಎಂದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾನ್ಯ ಸದಸ್ಯರ ಸಲಹೆಯನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

Providing sites to the Employees of Iron and Steel Works at Bhadravati.

*Q.—89. **Sri D. T. SEETHARAMA RAO** (Bhadravathi).—

Will the Government be pleased to state:—

(*a*) whether they propose to provide sites at Hutha and Jannapur extensions in Bhadravati Town for the workers and employees of the Iron and Steel Works and the Paper Mills after their retirement, through the New Town Board;

(*b*) whether the employees have requested the management and the Revenue Department for providing them sites in the above place;

(*c*) if so, the survey numbers of the New Town Area intended to be taken over for the formation of sites (details to be furnished)?

A.—**Sri T. SUBRAMANYA** (Minister for Law, Labour and Local Self-Government).—

(*a*) Yes.

(*b*) Yes.

(*c*) The New Town Board have requested the Management of the Mysore Iron and Steel Works to release survey number 71 measuring 4 acres and 7 guntas and Survey No. 72 measuring 1 acre and 39 guntas in Hutha to form sites and provide them to the employees of the Mysore Iron and Steel Works on their retirement.

ಶ್ರೀ ಡಿ. ಟಿ. ಸೀತಾರಾಮರಾವ್.—ಹೊಸಟೌನ್ ಬೋರ್ಡು ಜುನಾಯಿತ ಬೋರ್ಡೇ?

Mr. SPEAKER.—That is outside the scope of the main question.

ಶ್ರೀ ಡಿ. ಟಿ. ಸೀತಾರಾಮರಾವ್.—ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಹಾಗೂ ಕಾಗದದ ಕಾರ್ಖಾನೆ, ಈ ಎರಡು ಕಾರ್ಖಾನೆಗಳಲ್ಲಿ ಕೆಲಸಮಾಡುತ್ತಿರುವ ಎರಡುಸಾವಿರ ಜನ ಕೂಲಿಗಾರರು, ನೌಕರರು, ರಿಟೈರ್ ಆಗತಕ್ಕಂಥ ಕಾಲದಲ್ಲಿ ತಾವು ಇರುವಕಡೆಯೇ ಉಳಿಯಬೇಕು; ಅದಕ್ಕೋಸ್ಕರ ಮನೆಗಳನ್ನು ಕಟ್ಟುವುದಕ್ಕೆ ನಿವೇಶನ ಮಾಡಿಕೊಡಬೇಕು ಎಂದು ಕೇಳುತ್ತಿದ್ದಾರೆಯೇ? ಸರ್ಕಾರದವರು ಕೊಟ್ಟಿರತಕ್ಕ ಉತ್ತರ ದಲ್ಲಿ, ನಾಲ್ಕು ಎಕರೆ ಏಳು ಗುಂಟೆ ಮತ್ತು ಒಂದು ಎಕರೆ 39 ಗುಂಟೆ ಪ್ರದೇಶವನ್ನು ಬಿಟ್ಟುಕೊಡಬೇಕೆಂದು ಬೋರ್ಡಿನವರು ಕೇಳಿದ್ದಾರೆಂದು ಇದೆ. ಈ ವ್ಯವಸ್ಥೆ ಸರಿಯಾಗಿದೆ ಎಂದು ಸರ್ಕಾರ ತಿಳಿದುಕೊಂಡಿದೆಯೇ? ಜುನಾಯಿತ ಸದಸ್ಯರು ಇಲ್ಲದಿರುವುದರಿಂದ ಹಾಗೆ ಮಾಡಿರುವುದು ತಾನೆ?

ಅಧ್ಯಕ್ಷರು.—ಜುನಾಯಿತ ಬೋರ್ಡಿನ ವಿಷಯವನ್ನು ಬಿಟ್ಟು ಕೇಳಿ.

ಶ್ರೀ ಡಿ. ಟಿ. ಸೀತಾರಾಮರಾವ್.—ಕೇವಲ ನಾಲ್ಕು ಎಕರೆ, ಒಂದು ಎಕರೆ, ಚಿಲ್ಲರೆ, ಈಬಡಾವಣೆಗೆ ಸಾಕೆ?

ಶ್ರೀ ಟಿ. ಸುಬ್ರಹ್ಮಣ್ಯ.—ಎಷ್ಟು ಡಿಮ್ಯಾಂಡು ಇದೆಯೋ ಅಷ್ಟನ್ನೂ ಒದಗಿಸಿಕೊಡುವುದಕ್ಕೆ ಸಿದ್ಧರಾಗಿದ್ದಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಅನೆಕೊಪ್ಪದಲ್ಲಿ ಟೌನ್ ಬಡಾವಣೆ ಮನೆಗಳ ನಿವೇಶನಕ್ಕೋಸ್ಕರ ಜಾಗ ಬೇಕೆಂದು ಸರ್ಕಾರವನ್ನು ಕೇಳಿದ್ದುಂಟೋ?

ಶ್ರೀ ಟಿ. ಸುಬ್ರಹ್ಮಣ್ಯ.—ನೋಟೀಸು ಬೇಕು.

ಶ್ರೀ ಡಿ. ಟಿ. ಸೀತಾರಾಮರಾವ್. ಈ ಬಗ್ಗೆ ಕಾರ್ಮಿಕರಿಗೋಸ್ಕರ, ಇಂಥ ಮಹಾ ದೊಡ್ಡನಗರದಲ್ಲಿ, ರಿಟೈರ್‌ಆದವರ ವಸತಿಗೋಸ್ಕರ ಸರ್ಕಾರ ಏನೇನು ಯೋಚನೆ ಮಾಡುತ್ತಿದೆ?

ಶ್ರೀ ಟಿ. ಸುಬ್ರಹ್ಮಣ್ಯ.—ರಿಟೈರ್ ಆದ ಮೇಲೆ ವಸತಿ ಮಾಡಿಕೊಡುವುದಕ್ಕೆ ಈಗ ಸಾಧ್ಯವಿಲ್ಲ. ಕೆಲಸದಲ್ಲಿದ್ದಾಗ ವಸತಿಗೋಸ್ಕರ ಮನೆಗಳನ್ನು ಕಟ್ಟುತ್ತಾ ಇದ್ದೇವೆ.

Leakage in the amounts collected in Kempamma Devaru Temple at Sagasandra.

*Q.—110. **Sri G. N. PUTTANNA** (Tumkur).—

Will the Government be pleased to state:—

(*a*) whether Sri Kempamma Devaru Temple at Sagasandra Village, Nittur Hobli, Gubbi Taluk, is a Muzrai institution;

(*b*) whether they are aware that collections of nearly Rs. 200 to Rs. 300 towards *kanike* on Tuesdays and Fridays and Rs. 1,000 to Rs. 2,000 collected when the Utsava Devaru is taken out are not accounted for;

(*c*) whether they will cause an enquiry in this behalf and prevent all leakages and build up temple funds?

A.—**Sri Kadidal MANJAPPA** (Minister for Revenue).—

(*a*) Yes.

(*b*) No.

(*c*) Neither the collection of such huge amounts nor the receipt of such incomes to the institution is noticed. If there is a regular complaint it will be enquired into.

Sri G. N. PUTTANNA—Is there a regular complaint to be enquired into? ಈಗ ಎರಡು ವರ್ಷಗಳಲಾಗಾಯಿತು ಸಬ್‌ಡಿವಿಜನ್ ಆಫೀಸರು, ಮತ್ತು ಡೆಪ್ಯುಟಿ ಕಮೀಷನರಿಗೆ, ಯಾರಿಗೆ ಕಂಪ್ಲೇಟ್ ಕೊಟ್ಟರೂ, ಮೆದೆ ಬೇಯಿನದೆ ಇರುವುದು ಗೊತ್ತಿದೆಯೇ!

ಶ್ರೀ ಕಡಿದಾಳ್ ಮಂಜಪ್ಪ.—ಅದು ನನಗೆ ಗೊತ್ತಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈಗಲಾದರೂ enquiry hold ಮಾಡುತ್ತೀರ?

ಶ್ರೀ ಕಡಿದಾಳ್ ಮಂಜಪ್ಪ.—ಇದುವರೆಗೆ ತನಿಖೆ ನಡೆಸಿದ್ದರಲ್ಲ, ತಾವು ಪ್ರಶ್ನೆಯಲ್ಲಿ ಕೇಳಿರುವಂತೆ ಮೊಬಲಗು ಉತ್ಪತ್ತಿ ಆಗಿಲ್ಲ. Scale of income and expenditure sanction ಮಾಡಿರುವುದರಲ್ಲಿ, 50 ರೂಪಾಯಿ ಉತ್ಪವ ಕಾಣಿಕೆ, 255 ರೂಪಾಯಿ ಇತರ ಕಾಣಿಕೆ, ಇಷ್ಟುಮಾತ್ರ ವರಮಾನ ಬರುತ್ತಾ ಇದೆ ಎಂದು ಗೊತ್ತಾಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಸ್ಥಳದಲ್ಲಿರತಕ್ಕಂಥ ಅನೇಕರು ಲೆಕ್ಕಪತ್ರವನ್ನು ಕೊಡದೆ, ಬೆಳ್ಳಿ ಬಂಗಾರವನ್ನು ಕೂಡ ಕೊಡದೆ ಮೋಸ ನಡೆದಿದೆ. ಇದಕ್ಕೆ ಒಂದು ಎನ್‌ಕ್ವೈರಿ ನಡೆಸುತ್ತೀರ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾದ ಪಿರ್ಯಾದು ಬಂದರೆ ನಾವು ವಿಚಾರಣೆ ನಡೆಸುತ್ತೇವೆ. Vague allegations ಮೇಲೆ ಆಗುವುದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—Specific complaints ಕೊಟ್ಟರೂ, ಇದುವರೆಗೆ enquiry ನಡೆಸದೆ ಇರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ದೇವಸ್ಥಾನವು ಮುಜರಾಯಿ ಸಂಸ್ಥೆಯಾಗಿರುತ್ತದೆಯೇ ಎಂದು ಪ್ರಶ್ನೆ ಕೇಳಿದ್ದರೆ ಹೌದು ಎಂದು ಉತ್ತರದಲ್ಲಿ ಹೇಳಿದೆ. ಹಾಗಾದರೆ ಆ ಸಂಸ್ಥೆಯಲ್ಲಿ ಟ್ರಸ್ಟೀಸ್ ಇದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕಮಿಷನರ್ ಇದ್ದಾರೆ. ಟ್ರಸ್ಟೀಸೂ ಸಹ ಇದ್ದಾರೆಂದು ನನ್ನ ಅಭಿಪ್ರಾಯ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ರೀತಿ ಟ್ರಸ್ಟೀಸ್ ಇದ್ದರೂ, ತಹಸೀಲ್‌ದಾರರು ಜೇರ್‌ಮ್ಯಾ ಅಲ್ಲವೇ?

Sri Kadidal MANJAPPA.—I want notice.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೇವಸ್ಥಾನಕ್ಕೆ ಬರುವ ಆದಾಯಪತ್ರದ ಲೆಕ್ಕಗಳು ಮುಜರಾಯಿ ಎಂಡೋಮೆಂಟ್ ಕಮಿಷನರಿಂದ ತನಿಖೆ ಮಾಡಲಕ್ಕೆ ಸರ್ಕಾರಕ್ಕೆ ಬರುವುದಿಲ್ಲವೇ?

ಅಧ್ಯಕ್ಷರು.—ಅದನ್ನೆಲ್ಲಾ ಮುಜರಾಯಿ ಇಲಾಖೆ ಮಾಡಲಿದೆ.

Sri C. J. MUCKANNAPPA.—Is it not the intention of the Government that all receipts of the temple should be credited to the treasury?

Sri Kadidal MANJAPPA.—Not all the receipts of the temple. The Archaks are allowed to have the income to maintain the temple and look to the pooja and other purpose in the temple and pay to Government for the reserve fund Rs. 50.

Expenditure incurred in the N.E.S. Block, Tumkur Taluk.

*Q.—113. Sri G. N. PUTTANNA (Tumkur).—

Will the Government be pleased to state:—

(*a*) the date on which the N. E. S. Block was sanctioned and started functioning in Tumkur Taluk;

(*b*) the monthly expenditure incurred for the N.E.S. staff;

(*c*) the total amount of cost of petrol, oil and other expenses incurred for the use of jeep supplied to N.E.S. Block, Tumkur (monthwar statement may be furnished up-to-date);

(*d*) the total amount of grant sanctioned to this block;

(*e*) the details of works proposed, approved, sanctioned and completed (hobliwise details of works taken up, amount spent and works executed may be furnished)?

*A.—Sri H. C. LINGA REDDY (Deputy Minister for Planning and Development).—

(*a*) Tumkur Double Unit Block was sanctioned in Government Order No. P. & D./619/N.E.S./57, dated 18th September 1957 and started functioning from 2nd October 1957.

(*b*) Rs. 6,000 per month on an average.

(*c*) *Vide* Statement "A" given below.

(*d*) Rs. 24·00 lakhs for Tumkur Double Unit Block, and Rs. 6 lakhs for Nagavalli Half Block, for five years.

(*e*) *Vide* Statement "B" given below.